**ನಿರ್ಮಿತಿ ಕೇಂದ್ರ, ರಾಯಚೂರು**
ಕಡಿಮೆ ವೆಚ್ಚದ ಸಾಮಾಗ್ರಿಗಳ ಹಾಗೂ
ತಾಂತ್ರಿಕತೆಯ ವರ್ಗಾವಣೆ ಕೇಂದ್ರ
(ಕೇಂದ್ರ ಸರ್ಕಾರ ಹುಡ್ಕೊದ ಅನುದಾನತ್ವದಲ್ಲಿ
ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ)

**NIRMITHI KENDRA, RAICHUR**
Cost Effective Buildng Materials &
Technology Transfer Centre
(Sponsored by Govt., of India
HUDCO & Govt., of Karnataka)

Sy.No.809(A), Bolmandoddi Road, RAICHUR- 584 103, e-Mail ID:pmnkrcr@gmail.com
Contact No: Project Manager-99454 94157

ಸಂಖ್ಯೆ:ಜಿನಿರಾ/ಸಿಬ್ಬಂದಿ/ನೇಮಕಾತಿ/01/ 2024-25 ದಿನಾಂಕ 21-07-2025

## ನೇಮಕಾತಿ ಪ್ರಕಟಣೆ

ರಾಯಚೂರು ನಿರ್ಮಿತಿ ಕೇಂದ್ರವು **KSR Act 1960** ಅಡಿಯಲ್ಲಿ ನೋಂದಾಯಿತ ಸಂಸ್ಥೆಯಾಗಿರುತ್ತದೆ. ನಿರ್ಮಿತಿ ಕೇಂದ್ರಕ್ಕೆ Accountant-01 ಹುದ್ದೆಯನ್ನು ಒಂದು ವರ್ಷದ ಅವಧಿಗೆ ಹೊರ ಗುತ್ತಿಗೆ (through outsource) ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಹಿಂದೆ ದಿನಾಂಕ 28-05-2025 ರಂದು ಹೊರಡಿಸಿದ Accountant ಹುದ್ದೆಯ ನೇಮಕಾತಿ ಪ್ರಕಟಣೆಯನ್ನು ರದ್ದುಪಡಿಸಿದೆ.

Accountant-01 ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕೃತ website https://raichur.nic.in ರಲ್ಲಿ ದಿನಾಂಕ **21-07-2025** ರಿಂದ ದಿನಾಂಕ **05-08-2025**ರವರೆಗೆ Online ನಲ್ಲಿ Download ಮಾಡಿಕೊಂಡು, ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಸೂಕ್ತ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬಹುದು.

| | | |
|---|---|---|
| 1 | ಹುದ್ದೆಯ ಹೆಸರು | Accountant |
| 2 | ಹುದ್ದೆಗಳ ಸಂಖ್ಯೆ | 01 |
| 2 | ವಿದ್ಯಾರ್ಹತೆ | **M.Com or MBA (Finance)** with **1 Year Experience** in Accounting of Tally (Erp9, Tally Prime) . Filling of Income Tax TDS Challans & GST TDS Challans, Expert in MS Office & Excel, |
| 3 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ: 05-08-2025ರ ಸಂಜೆ 5.30ರೊಳಗೆ |

**ಷರತ್ತುಗಳು:**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ವಯೋಮಿತಿ ಗರಿಷ್ಠ 45 ವರ್ಷ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆಂತಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
4. ಅಭ್ಯರ್ಥಿಯು ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿರತಕ್ಕದ್ದಲ್ಲ.
5. **Accountant** ಹುದ್ದೆಗೆ **M.Com or MBA (Finance)** ಶೈಕ್ಷಣಿಕ ಅರ್ಹತೆಯ ಜೊತೆಗೆ ಅನುಕ್ರಮವಾಗಿ ಕನಿಷ್ಠ 1 ಅನುಭವ ಹೊಂದಿರತಕ್ಕದ್ದು.
6. ಅಭ್ಯರ್ಥಿಯು ಹುದ್ದೆಗೆ ನಿಗದಿಪಡಿಸಿದ ಕನಿಷ್ಠ 1 ವರ್ಷದ ಅನುಭವ ಪ್ರಮಾಣವನ್ನು ಅರ್ಜಿಯೊಂದಿಗೆ ಸಲ್ಲಿಸುವಾಗ, ಅನುಭವ ಪ್ರಮಾಣ ಪತ್ರ ನೀಡಿದ ಸಂಸ್ಥೆಯಿಂದ Misconduct ಅಥವಾ Financial Misappropriation ಅಡಿಯಲ್ಲಿ ಅಭ್ಯರ್ಥಿಯನ್ನು ವಜಾಗೊಳಿಸಿರುವುದಿಲ್ಲವೆಂದು ಮತ್ತು ಅಭ್ಯರ್ಥಿಯ ನಡತೆಯು ಉತ್ತಮವಾಗಿದೆಂದು NOC ಪಡೆದು ಕಡ್ಡಾಯವಾಗಿ ಅನುಭವ ಪ್ರಮಾಣ ಪತ್ರದೊಂದಿಗೆ ಸಲ್ಲಿಸತಕ್ಕದ್ದು.
7. ನೇಮಕಾತಿ ವಿಧಾನ:- ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಪೂರ್ವ ಅನುಭವದಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಲ್ಲಿ, ನಿಗದಿಪಡಿಸಿದ ವಿದ್ಯಾರ್ಹತೆ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯಲ್ಲಿ ಅತೀ ಹೆಚ್ಚು ಅಂಕ ಪಡೆದ (ಶೇಕಡದಲ್ಲಿ) ಅಭ್ಯರ್ಥಿಗಳನ್ನು ಮಾತ್ರ ಪಾರದರ್ಶಕತೆಯಿಂದ ನೇರವಾಗಿ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳ ಮೂಲ

ದಾಖಲೆಗಳ ನೈಜತೆ ಮತ್ತು ಅಭ್ಯರ್ಥಿಯ ನಡತೆಯ ಪೂರ್ವ ಪರಿಶೀಲನೆಗೆ ಒಳಪಟ್ಟಿರುತ್ತದೆ. (ಲಿಖಿತ ಪರೀಕ್ಷೆ ಅಥವಾ ಸಂದರ್ಶನ ಇರುವುದಿಲ್ಲ).

8. ಅಭ್ಯರ್ಥಿಯ ಆಯ್ಕೆ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕೃತ website https://raichur.nic.in ನಲ್ಲಿ ಮತ್ತು ಈ ಕಛೇರಿಯ ನೋಟೀಸ್ ಫಲಕದಲ್ಲಿ ಪ್ರಕಟಿಸಲಾಗುವುದು.
9. ಅಭ್ಯರ್ಥಿಯ ಸ್ವ-ವಿವರ, 10ನೇ ತರಗತಿ ಅಂಕಪಟ್ಟಿ, ಶೈಕ್ಷಣಿಕ ಅರ್ಹತೆಗೆ ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರ / ದಾಖಲೆಗಳನ್ನು, ನೇಮಕಾತಿ ಆದೇಶಗಳನ್ನು, ಅನುಭವ ಪ್ರಮಾಣ ಪತ್ರಗಳನ್ನು ಹಾಗೂ ಒಂದು ಭಾವಚಿತ್ರ ಮತ್ತು ಆಧಾರ್ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ದೃಢೀಕರಿಸಿ ಲಗತ್ತಿಸಿ ಕೊನೆಯ ದಿನಾಂಕದೊಳಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವುದು. ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
10. ಒಂದು ವರ್ಷಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ಒಂದು ವರ್ಷದ ಹೊರಗುತ್ತಿಗೆ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಅಗತ್ಯವಿದ್ದಲ್ಲಿ ಮಾತ್ರ ಮುಂದಿನ ವರ್ಷಕ್ಕೆ ವಿಸ್ತರಿಸಲಾಗುವುದು. ಇದನ್ನು ಅಭ್ಯರ್ಥಿಯ ಹಕ್ಕು ಎಂದು ತಿಳಿಯತಕ್ಕದ್ದಲ್ಲ.
11. ಆಯ್ಕೆಯಾದ ಅಭ್ಯರ್ಥಿಯು ರಾಯಚೂರು ನಿರ್ಮಿತಿ ಕೇಂದ್ರ ಬೈಲಾ ನಿಯಮಗಳಾನುಸಾರ ಕಾರ್ಯನಿರ್ವಹಿಸುವುದು.
12. ಆಯ್ಕೆಯಾದ ಅಭ್ಯರ್ಥಿಯು ರಾಯಚೂರು ನಿರ್ಮಿತಿ ಕೇಂದ್ರ ಬೈಲಾ ನಿಯಮಗಳಾನುಸಾರ ಕರಾರು ಒಪ್ಪಂದ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
13. ಅಂತಿಮ ನೇಮಕಾತಿ ಪ್ರಕ್ರೀಯೆ ಪೂರ್ಣಗೊಳ್ಳುವ ಪೂರ್ವದಲ್ಲಿ ಯಾವುದೇ ಕಾರಣ ನೀಡದೆ ಈ ನೇಮಕಾಗಿ ಪ್ರಕ್ರೀಯೆಯನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ನಿರ್ಮಿತಿ ಕೇಂದ್ರವು ಹೊಂದಿರುತ್ತದೆ.
14. ಆಯ್ಕೆ ಪ್ರಕ್ರೀಯೆಯಲ್ಲಿ, ಯಾವುದೇ ಹಂತದಲ್ಲಿ, ಯಾವುದೇ ರೀತಿಯ ಶಿಫಾರಸ್ಸನ್ನು ತಂದಲ್ಲಿ, ಸದರಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕೃತ ಅರ್ಜಿಯೆಂದು ಪರಿಗಣಿಸಲಾಗುವುದಲ್ಲದೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸಲಾಗುವುದು.
15. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸಕ್ಕೆ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.

ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ, ರಾಯಚೂರು

# ಅರ್ಜಿ ನಮೂನೆ - ಅಕೌಂಟೆಂಟ್

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ತಂದೆಯ / ಗಂಡನ ಹೆಸರು | |
| 3 | ಪೂರ್ಣ ವಿಳಾಸ | |
| 4 | ಮೊಬೈಲ್ ಸಂಖ್ಯೆ | |
| 5 | ಇ-ಮೇಲ್ ವಿಳಾಸ | |
| 6 | ಜನ್ಮ ದಿನಾಂಕ<br>(10ನೇ ತರಗತಿ ಅಂಕಪಟ್ಟಿಯಲ್ಲಿದ್ದಂತೆ)<br>(ದಾಖಲೆ ಲಗತ್ತಿಸುವುದು) | |
| 7 | ವಿದ್ಯಾರ್ಹತೆ **M.Com or MBA (Finance)** ಶೇಕಡವಾರು ಗಳಿಸಿದ ಅಂಕಗಳ ವಿವರ (ಎಲ್ಲಾ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳ ದೃಢೀಕೃತ ನಕಲುಗಳನ್ನು ಅರ್ಜಿಗಳೊಂದಿಗೆ ಲಗತ್ತಿಸತಕ್ಕದ್ದು) | |
| 8 | ಅನುಭವ ಪ್ರಮಾಣ ಪತ್ರಗಳು<br>**M.Com or MBA (Finance) with 1 year Experience in** Accounting of Tally (Erp9, Tally Prime) . Filling of Income Tax TDS Challans & GST TDS Challans, Expert in MS Office & Excel,<br>(ನೇಮಕಾತಿ ಆದೇಶ ಮತ್ತು ಅನುಭವ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು) | |
| 9 | ಅನುಭವ ಪ್ರಮಾಣ ಪತ್ರ ನೀಡಿದ ಸಂಸ್ಥೆಯಿಂದ Misconduct ಅಥವಾ Financial Misappropriation ಅಡಿಯಲ್ಲಿ ಅಭ್ಯರ್ಥಿಯನ್ನು ವಜಾಗೊಳಿಸಿರುವುದಿಲ್ಲವೆಂದು ಮತ್ತು ಅಭ್ಯರ್ಥಿಯ ನಡತೆಯು ಉತ್ತಮವಾಗಿದೆಂದು NOC ಪಡೆದ ದಾಖಲೆಯನ್ನು ಸಲ್ಲಿಸತಕ್ಕದ್ದು. | |
| 10 | ಅಭ್ಯರ್ಥಿ ನೀಡಲಿಚ್ಛಿಸುವ ಇತರೇ ವಿಷಯಗಳು | |

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ :

ಅಭ್ಯರ್ಥಿಯ ಹೆಸರು :